ವುದನ್ನು ಕಾಣುತ್ತೇವೆ. ಇವರ ತತ್ತ್ವಗಳು ಭಾರತದ ಗಡಿಯನ್ನು ದಾಟಿ, ಪಾಶ್ಚಾತ್ಯ ತತ್ತ್ವಜ್ಞಾನ ಕೇಂದ್ರಗಳಲ್ಲಿ ಮತ್ತು ಮನೋವಿಜ್ಞಾನ ಸಂಸ್ಥೆಗಳಲ್ಲಿ ತೀವ್ರವಾಗಿ ಪರೀಕ್ಷೆಗೆ ಒಳಪಟ್ಟಿವೆ. ಶ್ರೀರಾಮಕೃಷ್ಣರ ಮುಖಾಂತರ ಭಾರತೀಯ ತತ್ತ್ವಜ್ಞಾನದ ಅಗಾಧ ಸಂಪತ್ತು, ಅತ್ಯಂತ ಸರಳ ಮತ್ತು ಸ್ಪಷ್ಟರೂಪದಲ್ಲಿ ನಮಗೆ ದೊರಕಿದೆ ಎಂದರೆ ಅತಿಶಯೋಕ್ತಿಯೇನಲ್ಲ."

**ಹಾರ್ಲೋ ಶಾರ್‌ಪ್ಲೇ:** ಇವರು ಅಮೆರಿಕದ ಪ್ರಸಿದ್ಧ ಖಗೋಳಶಾಸ್ತ್ರಜ್ಞ ಮತ್ತು ಪತ್ರಿಕಾ ವರದಿಗಾರ. ಇವರ ಜೀವಿತಕಾಲ ೧೮೮೫ ರಿಂದ ೧೯೭೨. ಶ್ರೀರಾಮಕೃಷ್ಣರ ಮನಸ್ಸು ಮತ್ತು ಹೃದಯಗಳಲ್ಲಿ ಮನುಷ್ಯನ ಬಗೆಗಿನ ಕಳಕಳಿ ತುಂಬಿದೆ. ಯಾರು ಮಾನವೀಯ ಸಮಸ್ಯೆಗಳಿಗೆ ಸ್ಪಂದಿಸುತ್ತಾರೋ ಮತ್ತು ಅವುಗಳಿಗೆ ಒಂದು ನಿರ್ದಿಷ್ಟ ಕಾರ್ಯರೂಪವನ್ನು ಕೊಡುತ್ತಾರೋ, ಅಂಥವರು ಶ್ರೀರಾಮಕೃಷ್ಣರಿಗೆ ಅತ್ಯಂತ ಪ್ರಿಯರಾದವರು. ಈ ಬಗೆಯ ಅಭಿಪ್ರಾಯವನ್ನು ಹಾರ್ಲೋ ಶಾರ್‌ಪ್ಲೇ ಹೊಂದಿದ್ದರು.

**ಜಗದೀಶಚಂದ್ರ ಬೋಸ್:** ಇವರು ಭಾರತದ ಸುಪುತ್ರರಲ್ಲಿ ಒಬ್ಬರು. ಸುಮಾರು ೧೧೬ ವರ್ಷಗಳ ಹಿಂದೆಯೇ ಭಾರತದ ಪತಾಕೆಯನ್ನು ಜಾಗತಿಕ ವಿಜ್ಞಾನ ರಂಗದಲ್ಲಿ ಹಾರಿಸಿದ




ಮಹನೀಯರು. ಇವರು ಕೊಲ್ಕತಾ ವಿಶ್ವವಿದ್ಯಾನಿಲಯದಲ್ಲಿ ಭೌತಶಾಸ್ತ್ರ ಮತ್ತು ಸಸ್ಯಶಾಸ್ತ್ರಗಳ ಪ್ರಾಧ್ಯಾಪಕರಾಗಿದ್ದರು. ಇವರನ್ನು 'ರೇಡಿಯೋ ಸಂವಹನ'ದ ಪಿತಾಮಹರೆಂದು ಕರೆಯುತ್ತಾರೆ. ಜಗತ್ತಿನ ಒಬ್ಬ ಅತ್ಯಂತ ಶ್ರೇಷ್ಠ ವಿಜ್ಞಾನಿಯಾಗಿದ್ದರೂ, ಇವರಿಗೆ ನೊಬೆಲ್ ಪಾರಿತೋಷಕ ದೊರಕಲಿಲ್ಲ. ಇತ್ತೀಚೆಗೆ ಬ್ರಿಟಿಷರೇ ಈ ಪ್ರಮಾದವನ್ನು ಒಪ್ಪಿಕೊಂಡು, ಅದಕ್ಕಾಗಿ ವಿಷಾದವನ್ನೂ ವ್ಯಕ್ತಪಡಿಸಿದ್ದಾರೆ.

ಬೋಸ್ ಸ್ವಾಮಿ ವಿವೇಕಾನಂದರ ನಿಕಟವರ್ತಿಗಳಾಗಿದ್ದರು. ಅವರು ಸ್ವಾಮೀಜಿಯವರಿಗೆ ಹೀಗೆ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಾರೆ:

"ಸ್ವಾಮೀಜಿ ಕೇವಲ ಕೆಲವೇ ವರ್ಷಗಳ ತಮ್ಮ ಆಯುಸ್ಸಿನಲ್ಲಿ ಅದ್ಭುತ ಕಾರ್ಯವನ್ನು ಸಾಧಿಸಿದರು. ಕೇವಲ ಒಬ್ಬನೇ ವ್ಯಕ್ತಿಯಿಂದ ಇಷ್ಟೆಲ್ಲ ಸಾಧಿಸಲು ಸಾಧ್ಯವೇ? ಸ್ವಾಮೀಜಿಯವರ ನಿರ್ಗಮನದಿಂದ ಉಂಟಾದ ಶೂನ್ಯತೆಯನ್ನು ಭಾರತ ಭರಿಸಲಾರದು. ಅವರ ವಿಚಾರಧಾರೆಗಳು ಅವರ ಜನ್ಮಸ್ಥಳವಾದ ಕೊಲ್ಕತಾದಲ್ಲಿ ಆಳವಾಗಿ ಬೇರೂರಿವೆ.

ನಮ್ಮ ಜೀವನವು ಪ್ರತಿಧ್ವನಿಯಂತೆ ನೆನಪುಗಳ ಮರುಕಳಿಕೆಯೇ ಆಗಿದೆ. ಪ್ರತಿಯೊಂದು ಪ್ರತಿಧ್ವನಿಯೂ ಎಲ್ಲ ಕಾಲದಲ್ಲೂ ಅದ್ಭುತವಾದ ಪರಿಣಾಮವನ್ನು ಬೀರುವ ಸಾಮರ್ಥ್ಯ ಹೊಂದಿದೆ. ಅದರಲ್ಲೂ ಸ್ವಾಮಿ ವಿವೇಕಾನಂದರ ಕಾರ್ಯ ಮತ್ತು ಅವರ ಉಪದೇಶಗಳು ಜಗತ್ತಿನಾದ್ಯಂತ ಪಸರಿಸುತ್ತಿವೆ ಹಾಗೂ ಇವು ಎಲ್ಲ ರೀತಿಯ ಜನರಿಗೆ ಶಕ್ತಿ ಮತ್ತು ಸ್ಫೂರ್ತಿಯನ್ನು ನೀಡುತ್ತಿವೆ."

**ಪ್ರೊ. ಪ್ರಫುಲ್ಲಚಂದ್ರ ರಾಯ್:** ಇವರು ಭಾರತ ಕಂಡ ಅತ್ಯಂತ ಶ್ರೇಷ್ಠ ರಸಾಯನಶಾಸ್ತ್ರಜ್ಞರಲ್ಲಿ ಒಬ್ಬರು. ಕೊಲ್ಕತಾ ವಿಶ್ವವಿದ್ಯಾ



ನಿಲಯದಲ್ಲಿ ರಸಾಯನ ಶಾಸ್ತ್ರದ ಪ್ರಾಧ್ಯಾಪಕರಾಗಿದ್ದ ಇವರು 'ಬೆಂಗಾಲ್ ಕೆಮಿಕಲ್ ಆ್ಯಂಡ್ ಫಾರ್ಮಸೂಟಿಕಲ್ಸ್' ಸಂಸ್ಥೆಯನ್ನು ಸ್ಥಾಪಿಸಿದರು. ಸಂಶೋಧನೆಯಲ್ಲಿ ಇವರದು ಎತ್ತಿದ ಕೈ. ಸ್ವಾಮಿ ವಿವೇಕಾನಂದರ ಸಮಕಾಲೀನರಾದ ಇವರು, 'ಸರಳ ಜೀವನ ಮತ್ತು ಉನ್ನತ ಚಿಂತನೆ' ಯಿಂದ ಮಾತ್ರವೇ ನಮ್ಮ ದೇಶದ ಅಭಿವೃದ್ಧಿ ಸಾಧ್ಯ ಎಂದು ಹೇಳುತ್ತಿದ್ದರು. ತಮ್ಮ ಜೀವನವನ್ನು ಈ ಬಗೆಯಲ್ಲಿಯೇ ರೂಪಿಸಿಕೊಂಡರು. ಪ್ರೊ. ಪ್ರಫುಲ್ಲಚಂದ್ರ ರಾಯ್ ಅವರು History of Hindu Chemistry ಮತ್ತು Life and Experience of a Bengali Chemist ಎಂಬ ಎರಡು ಗ್ರಂಥಗಳನ್ನು ಬರೆದಿದ್ದಾರೆ.

ಇಂತಹ ಮಹನೀಯರು ಸ್ವಾಮಿ ವಿವೇಕಾನಂದರ ಬಗ್ಗೆ ಹೇಳಿರುವ ಮಾತುಗಳು ಗಮನಾರ್ಹವಾದುವು:

"ದರಿದ್ರ ನಾರಾಯಣನ ಸೇವೆ ಸ್ವಾಮಿ ವಿವೇಕಾನಂದರ ಜೀವನದ ಮಹತ್ವದ ವಿಷಯವಾಗಿತ್ತು. ಸ್ವಾಮೀಜಿಯವರು ಮೇಲ್ವರ್ಗದ ಜನರಿಗೆ ಈ ಕಾರ್ಯದಲ್ಲಿ ತೊಡಗಿಸಿಕೊಳ್ಳಲು ಕರೆ ನೀಡಿದರಲ್ಲದೆ, ತಾವೂ ಸ್ವತಃ ಪಾಲಿಸಿ ತೋರಿಸಿದರು. ದೀನದಲಿತರನ್ನು ನಿಮ್ಮ ಸೋದರರಂತೆ ಭಾವಿಸಿ ಎಂದು ಬೋಧಿಸಿದ್ದಲ್ಲದೆ, ಅದನ್ನು ಕಾರ್ಯರೂಪಕ್ಕೂ ತಂದರು. ದೇವಾಲಯದಲ್ಲಿರುವ ಮೂರ್ತಿಪೂಜೆಯಂತೆಯೇ, ದರಿದ್ರ ನಾರಾಯಣನ ಸೇವೆಯಲ್ಲಿಯೂ ತೊಡಗಿಕೊಳ್ಳಬೇಕೆಂದೂ, ಆ ಮೂಲಕ ಭಾರತೀಯ ಸಮಾಜದಲ್ಲಿರುವ ಜಾತಿಮತಗಳ ಅಸಮಾನತೆಯನ್ನು ಹೋಗಲಾಡಿಸಬೇಕೆಂದೂ ಅವರು ಕರೆಕೊಟ್ಟರು.

ಸ್ವಾಮೀಜಿಯವರು ವೇದಾಂತದ ತತ್ತ್ವಗಳನ್ನು ವಿಶ್ವಾದ್ಯಂತ ಬೋಧಿಸಿದರು. ಅವರ ಅನೇಕ ಶಿಷ್ಯರು ಭಾರತಕ್ಕೆ ಬಂದು, ತಮ್ಮ ತನು ಮನ ಧನಗಳಿಂದ ಭಾರತಾಂಬೆಯ ಸೇವೆಯನ್ನು ಮಾಡಿದ್ದಾರೆ."

ಹೀಗೆ ಪ್ರೊ. ಪ್ರಫುಲ್ಲಚಂದ್ರ ರಾಯ್ ಅವರು ಸ್ವಾಮೀಜಿಯವರನ್ನು ಕೊಂಡಾಡಿದ್ದಾರೆ. ⌘



## ಸ್ವಾಮಿ ವಿವೇಕಾನಂದರು ನಿರೂಪಿಸಿದ

# ನೀತಿಕಥೆಗಳು



ಡಾ. ಕೆ. ಅನಂತರಾಮು

## ವಸುಪಾಲಮಂತ್ರಿಯ ಬುದ್ಧಿವಂತಿಕೆ

ನಮ್ಮ ಶರೀರವು ಒಂದು ಯಂತ್ರವಿದ್ದಂತೆ. ಆ ಯಂತ್ರವನ್ನು ಚಾಲನೆಯಲ್ಲಿಟ್ಟಿರುವ ಶಕ್ತಿಗೆ 'ಪ್ರಾಣ' ಎಂದು ಹೆಸರು. ಉಸಿರಾಟದ ಮೂಲಕ ಆ ಪ್ರಾಣವು ವ್ಯಕ್ತವಾಗುತ್ತದೆ. ಆ ಉಸಿರಾಟವನ್ನು ಸ್ವಾಧೀನಕ್ಕೆ ತಂದುಕೊಳ್ಳಲು ಒಂದು ಸಾಧನವಿದೆ. ಆ ಸಾಧನವೇ 'ಪ್ರಾಣಾಯಾಮ' ವೆಂದೆನಿಸಿದೆ. ಪ್ರಾಣಾಯಾಮವು ಮನಸ್ಸಿನ ಶಕ್ತಿಗಳನ್ನು ಏಕೀಕರಿಸಿಕೊಳ್ಳುವುದಕ್ಕೆ ತುಂಬಾ ಪ್ರಯೋಜನಕಾರಿಯಾಗಿದೆ. ಅದರ ಬಲದಿಂದ ನಾವು ಮೆಲ್ಲನೆ ನಮ್ಮ ಶರೀರದ ಒಳಹೊಕ್ಕು, ಅದರೊಳಗೆ ನಡೆಯುವ 'ನಾಡೀಸಂಚಾರ'ಗಳೆಂಬ ಸೂಕ್ಷ್ಮವ್ಯಾಪಾರಗಳನ್ನು ಕಂಡುಕೊಳ್ಳಬಹುದಾಗಿದೆ. ಈ ನಾಡೀಸಂಚಾರದಿಂದಲೇ ಮನಸ್ಸು ವ್ಯಾಪಾರಮಾಡುತ್ತಿರುವುದರಿಂದ, ಕೊನೆಗೆ ಶರೀರವೂ ಮನಸ್ಸೂ ಸಂಪೂರ್ಣವಾಗಿ ನಮ್ಮ ಕೈಗೆ ಸಿಕ್ಕಂತಾಗುತ್ತದೆ; ಅವರೆಡೂ ನಮ್ಮ ದಾಸರಾಗುತ್ತವೆ. ಹಾಗಾಗಬೇಕಾದರೆ ಪ್ರಾಣಾಯಾಮದಿಂದಲೇ ಪ್ರಾರಂಭಿಸಬೇಕು.

ಚಂದ್ರಕೀರ್ತಿಯೆಂಬ ಮಂತ್ರಿಯ ಆಶ್ರಯದಲ್ಲಿ ವಸುಪಾಲನೆಂಬ ಮಂತ್ರಿಯೊಬ್ಬನಿದ್ದನು. ಒಮ್ಮೆ ವಸುಪಾಲನಿಂದ ಏನೋ ಅಪರಾಧ ನಡೆದುಹೋಯಿತು. ಕೋಪಗೊಂಡ ದೊರೆಯು ಅಪರಾಧಕ್ಕಿಂತಲೂ ದೊಡ್ಡದಾದ ಶಿಕ್ಷೆಯನ್ನು ವಿಧಿಸಿಬಿಟ್ಟನು. "ನೀನು ಅಲ್ಲಿಯೇ ಸಾಯಿ" ಎಂದು ಪಟ್ಟಣದ ಕೋಟೆಯ ಎತ್ತರವಾದ ಒಂದು ಬುರುಜಿನೊಳಗೆ ಮಂತ್ರಿಯನ್ನು ಬಂಧಿಸಿಬಿಟ್ಟನು. ಆ ಮಂತ್ರಿಗೆ ಸಾವಿತ್ರಿಯೆಂಬ ಮಡದಿಯಿದ್ದಳು. ಅವಳು ಸಾಧ್ವಿಯೂ, ಪತಿಪರಾಯಣೆಯೂ, ದೈವಭಕ್ತೆಯೂ ಆಗಿದ್ದಳು. ಪತಿಗುಂಟಾದ ಶಿಕ್ಷೆಯಿಂದ ಅವಳು ಬಹಳ ದುಃಖಿತೆಯಾದಳು; "ನನ್ನ ಗಂಡನನ್ನು ಹೇಗಾದರೂ ಮಾಡಿ ಬಂಧಮುಕ್ತನನ್ನಾಗಿ ಮಾಡಪ್ಪಾ" ಎಂದು ನಿತ್ಯವೂ ದೇವರನ್ನು ಪ್ರಾರ್ಥಿಸುತ್ತಿದ್ದಳು. ಅಷ್ಟುಮಾತ್ರವಲ್ಲದೆ, ನಿತ್ಯವೂ ನಡುರಾತ್ರಿಯಲ್ಲಿ ಗುಟ್ಟಾಗಿ ಬುರುಜಿನ ಬುಡಕ್ಕೆ ಹೋಗಿ, ತನ್ನ ಗಂಡನನ್ನು ಕುರಿತು, "ನಿಮ್ಮ ಬಿಡುಗಡೆಗಾಗಿ ನಾನೇನಾದರೂ ಸಹಾಯ ಮಾಡಬಹುದೇ?" ಎಂದು ಕೇಳುತ್ತಿದ್ದಳು. ಆಗ ವಸುಪಾಲ ಮಂತ್ರಿಯು, "ನೀನೇನು ಮಾಡಬಲ್ಲೆ, ಇದು ನನ್ನ ಕರ್ಮಫಲ, ಹೋಗಿ ಮಲಗಿಕೋ" ಎಂದು ಸಮಾಧಾನಿಸಿ ಕಳುಹಿಸುತ್ತಿದ್ದನು. ಆಕೆಯ ಪಾಲಿಗೆ ಅದೊಂದು ನಿತ್ಯವಿಧಿಯೇ ಆಗಿತ್ತು. "ನಾನು ಬಂಧನದಿಂದ ಬಿಡುಗಡೆಹೊಂದಲು ಏನಾದರೂ ಮಾರ್ಗವಿದೆಯೆ?" ಎಂದು ಮಂತ್ರಿಯು ತೀವ್ರವಾಗಿ ಆಲೋಚಿಸುತ್ತಿರುವಾಗಲೇ ಅವನಿಗೊಂದು ಉಪಾಯ ಹೊಳೆಯಿತು.

ಎಂದಿನಂತೆ ಒಂದು ನಡುರಾತ್ರಿ ಸಾವಿತ್ರಿಯು ಬುರುಜಿನ ಬುಡಕ್ಕೆ ಬಂದುನಿಂತು, "ನಿಮ್ಮ ಬಿಡುಗಡೆಗಾಗಿ ನಾನೇನು ಮಾಡಲಿ" ಎಂದು ಕೇಳಿದಾಗ ಮಂತ್ರಿಯು, "ನಾಳೆ ರಾತ್ರಿ ನೀನು ಇಲ್ಲಿಗೆ ಬರುವಾಗ ನಾನು ಹೇಳುವ ಆರು ವಸ್ತುಗಳನ್ನು ನೆನಪಿಟ್ಟುಕೊಂಡು ತೆಗೆದುಕೊಂಡು ಬಾ" ಎಂದನು. ಅದಕ್ಕೆ ಸಾವಿತ್ರಿಯು, "ಆಗಲಿ ಹೇಳಿ, ತಪ್ಪದೆ ತರುತ್ತೇನೆ" ಎಂದಳು. "ಮೊದಲನೆಯದಾಗಿ ಈ ಬುರುಜಿನಷ್ಟು ಎತ್ತರದವರೆಗೆ ಏರುವಷ್ಟು ಉದ್ದದ ಒಂದು ದಪ್ಪನೆಯ ಹಗ್ಗವು ಬೇಕು; ಎರಡನೆಯದಾಗಿ ಉಡಿದಾರದ ಗಾತ್ರಕ್ಕೆ ಹೊಸೆದ ನೂಲಿನ ದಾರವೊಂದು ಬೇಕು; ಮೂರನೆಯದಾಗಿ ಸೆಣಬಿನಿಂದ ಹೊಸೆದ ನೂಲಿನ ದಾರಕ್ಕಿಂತ ಹೆಚ್ಚು ದಪ್ಪನಾದ ಇನ್ನೊಂದು ದಾರವು ಬೇಕು; ನಾಲ್ಕನೆಯದಾಗಿ ತೆಳುವಾದ ರೇಷ್ಮೆಯ ದಾರವೊಂದು ಬೇಕು. ಇವೆಲ್ಲವೂ ಬುರುಜನ್ನು ಮುಟ್ಟುವಷ್ಟು ಉದ್ದವಿರಬೇಕು. ಐದನೆಯದಾಗಿ ಜೀವಂತವಾದ ಒಂದು ಜೀರುಂಡೆಹುಳು ಬೇಕು. ಆರನೆಯದಾಗಿ ಸ್ವಲ್ಪ ಜೇನುತುಪ್ಪ ಬೇಕು" ಎಂದು ವಿವರಿಸಿದನು. ಸಾಧ್ವಿಯಾದ ಅವಳು, "ಆ ವಸ್ತುಗಳು ನಿಮಗೇಕೆ ಬೇಕು, ಅವುಗಳಿಂದ ಏನು ಪ್ರಯೋಜನವಾಗುತ್ತದೆ" ಎಂದು ಪ್ರಶ್ನಿಸಲಿಲ್ಲ. "ಹಾಗೆಯೇ ಆಗಲಿ, ತರುತ್ತೇನೆ" ಎಂದು ಹೇಳಿ ಮನೆಗೆ ತೆರಳಿದಳು.

ಮರುದಿನಕ್ಕೆ ಸಾವಿತ್ರಿಯು ತನ್ನ ಪತಿಯು ಹೇಳಿದ್ದ ವಸ್ತುಗಳನ್ನೆಲ್ಲ ಜೋಪಾನವಾಗಿ ಜೊತೆಮಾಡಿಕೊಂಡು, ಎಂದಿನಂತೆ ಬುರುಜಿನ ಬುಡಕ್ಕೆ ಬಂದುನಿಂತಳು. ಜೀರುಂಡೆಯೆಂಬುದು ಜೀರ್ ಜೀರ್ ಎಂದು ಧ್ವನಿಮಾಡುವ ದುಂಬಿಯ ಜಾತಿಗೆ ಸೇರಿದ ಒಂದು ಹುಳು. "ಸ್ವಾಮಿ, ನೀವು ಹೇಳಿದ ವಸ್ತುಗಳನ್ನೆಲ್ಲಾ ತಂದಿದ್ದೇನೆ" ಎಂದು ಸಾವಿತ್ರಿಯು ಹೇಳಿದಳು. ಆಗ ಮಂತ್ರಿಯು, "ನೀನು ಮೊದಲು ಆ ರೇಷ್ಮೆದಾರದ ಒಂದು ತುದಿಗೆ ಜೀರುಂಡೆಹುಳುವನ್ನು ಕಟ್ಟಿ, ಅದರ ಮುಸುಡಿಗೆ ಒಂದು ತೊಟ್ಟು ಜೇನುತುಪ್ಪವನ್ನು ಸವರಿ, ಅದರ ಮುಸುಡಿಯನ್ನು ಮೇಲು ಮಾಡಿ, ಬುರುಜಿನ ಗೋಡೆಯಮೇಲೆ ಬಿಡು. ನೀನು ರೇಷ್ಮೆದಾರವನ್ನು ಕೈಲಿಹಿಡಿದು, ಅದು ಸಿಕ್ಕಾಗದಂತೆ ಸ್ವಲ್ಪ ಸ್ವಲ್ಪ




ವಾಗಿ ಸಡಿಲಬಿಡುತ್ತಿರು" ಎಂದನು. ಸಾವಿತ್ರಿಯು ಹಾಗೆಯೇ ಮಾಡಿದಳು. ಜೀರುಂಡೆಹುಳುವು ತನ್ನ ಮುಸುಡಿಗೇ ಜೇನು ತುಪ್ಪವು ಸವರಿದ್ದರೂ ಅದನ್ನು ತಿಳಿಯದೆ, "ಇದೆಲ್ಲಿಯೋ ಜೇನು ತುಪ್ಪದ ಪರಿಮಳ ಬರುತ್ತಿದೆಯಲ್ಲಾ" ಎಂದುಕೊಂಡು, ಅದನ್ನು ಪಡೆಯುವ ಆಸೆಯಿಂದ, ಅದನ್ನು ಹುಡುಕುತ್ತ ಹುಡುಕುತ್ತ, ಮೆಲ್ಲ ಮೆಲ್ಲನೆ ಹರಿದಾಡಿಕೊಂಡು ಮೇಲೇರಿತು. ಕೊನೆಗೆ ಅದು ಬುರುಜಿನ ತುದಿಯನ್ನು ಮುಟ್ಟುತ್ತಿದ್ದಂತೆ, ವಸುಪಾಲಮಂತ್ರಿಯು ಮೆಲ್ಲನೆ ಆ ಜೀರುಂಡೆಯನ್ನು ಹಿಡಿದುಕೊಂಡು, ಅದರಿಂದ ರೇಷ್ಮೆನೂಲನ್ನು ಬಿಡಿಸಿಕೊಂಡು, ಹುಳುವನ್ನು ಮುಕ್ತಗೊಳಿಸಿದನು.

ಆಮೇಲೆ ಮಂತ್ರಿಯು ಸಾವಿತ್ರಿಯನ್ನು ಕುರಿತು, "ಈಗ ನೀನು ನಿನ್ನ ಕೈಲಿರುವ ರೇಷ್ಮೆದಾರದ ತುದಿಗೆ ಆ ನೂಲಿನ ದಾರವನ್ನು ಕಟ್ಟು" ಎಂದು ಸೂಚಿಸಿದನು. ಅವಳು ಹಾಗೆಯೇ ಮಾಡಿದಳು. ಆಗ ಮಂತ್ರಿಯು ತನ್ನ ಕೈಲಿದ್ದ ರೇಷ್ಮೆದಾರವನ್ನು ಮೆಲ್ಲಗೆ ಮೇಲೆಳೆಯುತ್ತ, ಅದರ ಕೊನೆಗೆ ಕಟ್ಟಿದ್ದ ನೂಲಿನ ದಾರವನ್ನು ತನ್ನ ಕೈಗೆ ತೆಗೆದುಕೊಂಡನು. ಅದರ ಇನ್ನೊಂದು ತುದಿ ಸಾವಿತ್ರಿಯ ಕೈಲಿತ್ತು. ಆಗ ಮಂತ್ರಿಯು "ಈಗ ಸೆಣಬಿನ ದಾರವನ್ನು ನೂಲಿನ ದಾರದ ಕೊನೆಗೆ ಕಟ್ಟು" ಎಂದು ಹೇಳಿದನು. ಸಾವಿತ್ರಿಯು ಹಾಗೆಯೇ ಮಾಡಿದಳು. ಮಂತ್ರಿಯು ನೂಲಿನ ದಾರವನ್ನು ಮೇಲೆಳೆಯುತ್ತ, ಅದರ ತುದಿಯಲ್ಲಿದ್ದ ಸೆಣಬಿನ ದಾರವನ್ನು ತನ್ನ ವಶಕ್ಕೆ ತೆಗೆದುಕೊಂಡನು. ಕೊನೆಗೆ ಮಂತ್ರಿಯು, "ನಿನ್ನ ಕೈಲಿರುವ ಸೆಣಬಿನ ದಾರದ ತುದಿಗೆ ನೀನು ತಂದಿರುವ ದಪ್ಪನೆಯ ಹಗ್ಗವನ್ನು ಕಟ್ಟು" ಎಂದನು. ಅವಳು ಹಾಗೆಯೇ ಮಾಡಿದಳು. ಸೆಣಬಿನ ದಾರವನ್ನು ಮೇಲೆಳೆಯುತ್ತ ಹಗ್ಗವನ್ನು ಸ್ವಾಧೀನಪಡಿಸಿಕೊಂಡ ಬಳಿಕ, ಮಂತ್ರಿಯ ಉಪಾಯ ಫಲಿಸಿದಂತಾಯಿತು. ಒಡನೆಯೆ ವಸುಪಾಲಮಂತ್ರಿಯು ತನ್ನ ಕೈಲಿದ್ದ ಹಗ್ಗದ ತುದಿಯನ್ನು ಬುರುಜಿನ ಕಂಬವೊಂದಕ್ಕೆ ಬಿಗಿದು, ಅದರ ಬಲದಿಂದ ಸರಸರನೆ ಕೆಳಕ್ಕಿಳಿದು ಬಂದನು. ಆಮೇಲೆ ಅವನಿಗೆ ಇನ್ನಾವ ಕಷ್ಟವೂ ಉಳಿಯಲಿಲ್ಲ. ಮಡದಿ ಸಾವಿತ್ರಿಗೆ ಸ್ವರ್ಗವೇ ನೆಲಕ್ಕಿಳಿದು ಬಂದಂತಾಯಿತು. ಆ ನಡುರಾತ್ರಿಯಲ್ಲಿ ಅವರು ಗುಟ್ಟಾಗಿ ತಮ್ಮ ಮನೆಯನ್ನು ಸೇರಿಕೊಂಡರು. ಮರುದಿನ ಬೆಳಗಿನಜಾವಕ್ಕೆ ಮೇಲೆದ್ದು ಮಾರುವೇಷವನ್ನು ಧರಿಸಿ, ವಸುಪಾಲನು ಸಾವಿತ್ರಿಯೊಡನೆ ಪಟ್ಟಣದ ಹೆಬ್ಬಾಗಿಲನ್ನು ದಾಟಿ, ಬಂಧನಮುಕ್ತನಾಗಿ ಎತ್ತಲೋ ಹೊರಟುಹೋದನು.

ಉಸಿರಾಟವೆಂಬುದು ಶರೀರವೆಂಬ ಯಂತ್ರಕ್ಕೆ ಪ್ರಧಾನ ಚಕ್ರವಾಗಿದೆ. ದೊಡ್ಡದಾಗಿರುವ ಎಂಜಿನ್ನೆಂಬ ಶಕ್ತಿಯಂತ್ರದಲ್ಲಿ ಮೊದಲು ಪ್ರಧಾನಚಕ್ರವು ತಿರುಗುತ್ತದೆ. ಈ ಚಲನೆಯು ಯಂತ್ರದ ಬೇರೆಬೇರೆ ಭಾಗಗಳಿಗೆ ತಾಕುತ್ತ, ಕೊನೆಗೆ ಅತ್ಯಂತ ಸೂಕ್ಷ್ಮವಾಗಿರುವ, ಅತ್ಯಂತ ಕಡೆಯದಾದ ಯಂತ್ರಭಾಗವನ್ನು ಚಲಿಸುವಂತೆ ಮಾಡುತ್ತದೆ.

ಹೀಗೆಯೇ ಈ ಶರೀರದಲ್ಲಿರುವ ಪ್ರತಿಯೊಂದು ಭಾಗಕ್ಕೂ ಚಲನಶಕ್ತಿಯನ್ನು ಕೊಟ್ಟು, ಆ ಚಲನೆಯನ್ನು ಕ್ರಮಪಡಿಸುವುದರಲ್ಲಿ ಉಸಿರಾಟವೆಂಬುದೇ ಪ್ರಧಾನಚಕ್ರವಾಗಿದೆ. ಈ ನಮ್ಮ ಶರೀರದಲ್ಲಿ ಶ್ವಾಸಸಂಚಾರವನ್ನು ಸೂಕ್ಷ್ಮವಾದ ರೇಷ್ಮೆಯ ನೂಲಿಗೆ ಹೋಲಿಸಬಹುದು. ಅದನ್ನು ಹಿಡಿದು ಸ್ವಾಧೀನಕ್ಕೆ ತಂದುಕೊಂಡ ಮೇಲೆ ನಾಡೀಸಂಚಾರವೆಂಬ ದಪ್ಪನೆಯ ದಾರವು ಕೈವಶವಾಗುತ್ತದೆ. ಆಮೇಲೆ ಆಲೋಚನೆಗಳೆಂಬ ಸೆಣಬಿನ ಗಟ್ಟಿ ದಾರವು ಕೈಗೆ ಸಿಗುತ್ತದೆ. ಕೊನೆಯಲ್ಲಿ ಪ್ರಾಣವೆಂಬ ಹಗ್ಗವೇ ಸಿಕ್ಕಿಬಿಡುತ್ತದೆ. ಆ ಪ್ರಾಣವು ಸ್ವಾಧೀನವಾದೊಡನೆ ಮುಕ್ತಿಯ ದ್ವಾರವು ತಾನೇತಾನಾಗಿ ತೆರೆದುಕೊಳ್ಳುತ್ತದೆ.